ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	743
ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ.ಅಡಗೂರ್ ಹೆಚ್ ವಿಶ್ವನಾಥ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	22.02.2022
ಉತ್ತರಿಸುವವರು	:	ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ರಾಜ್ಯ ಆಯುಕ್ತರ ಹುದ್ದೆಯನ್ನು ವಿಕಲಚೇತನರಿಗೆ ಮಾತ್ರ ಕಾಯ್ದಿರಿಸುವುದು ನಿಜವೆ:	ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ರಾಜ್ಯ ಆಯುಕ್ತರ ಹುದ್ದೆಯನ್ನು ವಿಕಲಚೇತನರಿಗೆ ಮಾತ್ರ ಕಾಯ್ದಿರಿಸಿರುವುದಿಲ್ಲ.
ಆ)	ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ರಾಜ್ಯ ಆಯುಕ್ತರ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವ ವಿಕಲಚೇತನ ವ್ಯಕ್ತಿಗಳಿಗೆ ಯಾವುದೇ ಮಾನದಂಡ ವಿಧಿಸದೆ ಮತ್ತೊಂದು ಅವಧಿಗೆ ಸೇವೆ ಸಲ್ಲಿಸಲು ಪ್ರಥಮ ಆದ್ಯತೆ ನೀಡುವಂತೆ, ಸಂಘ ಸಂಸ್ಥೆಗಳು, ವಿಧಾನಸಭೆ, ವಿಧಾನಪರಿಷತ್ ಸದಸ್ಯರು ಹಾಗೂ ಸಚಿವರುಗಳು ಬರೆದಿರುವ ಶಿಫಾರಸ್ಸು ಪತ್ರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮವೇನು: (ವಿವರ ನೀಡುವುದು)	ಈ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ಪರಿಶೀಲಿಸಲಾಗುತ್ತಿದೆ.
ಇ)	ಸದರಿ ಹುದ್ದೆಗೆ ನಿಗದಿಪಡಿಸಲಾದ ಅಭ್ಯರ್ಥಿಗಳ ವಯೋಮಿತಿಯನ್ನು 65 ರಿಂದ 68 ವರ್ಷಕ್ಕೆ ಹೆಚ್ಚಿಸುವ ಬಗ್ಗೆ ಹಲವಾರು ಸಂಘ ಸಂಸ್ಥೆಗಳಿಂದ ಮನವಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು:	ಈ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ಪರಿಶೀಲಿಸಲಾಗುತ್ತಿದೆ.
ಈ)	ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ರಾಜ್ಯ ಆಯುಕ್ತರ ಹುದ್ದೆಯಲ್ಲಿ ಹಾಲಿ ಖಾಲಿ ಇರುವ ಕಾರ್ಯದರ್ಶಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಉನ್ನತೀಕರಿಸಿದರೆ ಅಧಿನಿಯಮ ಶ್ರೇಯೋಭಿವೃದ್ಧಿಗೆ ತುಂಬಾ ಸಹಕಾರಿಯಾಗುವುದಿಲ್ಲವೇ: ಹಾಗಿದ್ದಲ್ಲಿ, ಸರ್ಕಾರದ ಹಂತದಲ್ಲಿ ಈ ಬಗ್ಗೆ ಕೈಗೊಳ್ಳುವ ಕ್ರಮ ಹಾಗೂ ಅನುಸರಿಸುವ ವಿಧಾನ ಯಾವುದು: (ವಿವರ ಒದಗಿಸುವುದು)	ಸರ್ಕಾರದ ಆದೇಶ ಸಂಖ್ಯೆ: ಮಮಇ 296 ಪಿಹೆಚ್‌ಪಿ 97 ದಿನಾಂಕ: 31.03.1998 ಮತ್ತು ತಿದ್ದುಪಡಿ ಆದೇಶ ಸಂಖ್ಯೆ: ಮಮಇ 380 ಪಿಹೆಚ್‌ಪಿ 2000, ದಿ: 05.08.2000 ರನ್ವಯ ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಚೇರಿಗೆ ಹುದ್ದೆಗಳನ್ನು ಸೃಜಿಸಲಾಗಿದೆ. (ಪ್ರತಿ ಲಗತ್ತಿಸಿದೆ) ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಚೇರಿಗೆ ಕಾರ್ಯದರ್ಶಿಯವರ ಹುದ್ದೆಯನ್ನು ಸೃಜಿಸಿರುವುದಿಲ್ಲ. ಆದುದರಿಂದ ಕಾರ್ಯದರ್ಶಿಗಳ ಹುದ್ದೆಯನ್ನು ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಉನ್ನತೀಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
ಉ)	ಈಗಾಗಲೇ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ರಾಜ್ಯ ಆಯುಕ್ತರಾಗಿ ಸೇವೆ ಸಲ್ಲಿಸಿದ ಅಂಗವಿಕಲ ವ್ಯಕ್ತಿಗಳನ್ನು ಮತ್ತೊಂದು ಅವಧಿಗೆ ನೇಮಕ ಮಾಡುವುದರಿಂದ ರಾಜ್ಯ ಅಂಗವಿಕಲರ ಶ್ರೇಯೋಭಿವೃದ್ಧಿಗೆ ಸಹಕಾರಿಯಾಗುವುದಿಲ್ಲವೇ: ಹಾಗಿದ್ದಲ್ಲಿ, ಇಂತಹ ಅಂಗವಿಕಲ ವ್ಯಕ್ತಿಗಳನ್ನು ನೇಮಕ ಮಾಡುವಲ್ಲಿ ಸರ್ಕಾರವು ಕೈಗೊಳ್ಳುವ ಕ್ರಮವೇನು?	ಪ್ರಸ್ತುತ ಜಾರಿಯಲ್ಲಿರುವ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ನಿಯಮಗಳು-2019ರ ಸೆಕ್ಷನ್ 32 (2)ರ ರೀತ್ಯಾ ಒಬ್ಬ ವ್ಯಕ್ತಿಯು, ಅರವತ್ತೈದು ವರ್ಷಗಳ ವಯಸ್ಸಿನ ಮಿತಿಗಳಿಗೊಳಪಟ್ಟು, ಗರಿಷ್ಟ ಎರಡು ಅವಧಿಗಳವರೆಗೆ ರಾಜ್ಯ ಆಯುಕ್ತರಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸಂಖ್ಯೆ: ಮಮಇ 55 ಪಿಹೆಚ್‌ಪಿ 2022

Halappa

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು

Karnataka Legislative Council

Stared Question No : 743
Name of the Honorable Member Of Legislative Council : Mr. Adaguru H Vishwanath
Date of Reply : 22.02.2022
Minister to be replied : Hon'ble Minister of Mines and Geology, and Women and Child Development and Empowerment of Differently Abled and Senior Citizens.

Sl.No	Question	Answer
A	Is it true that the post of Commissioner, Commissionerate for the Rights of the Persons with Disabilities, Karnataka State is reserved for disabled only?	The post of Commissioner, Commissionerate for the Rights of the Persons with Disabilities, Karnataka State is not reserved for the disabled persons only.
B	Has the Government received any recommendation letters from Institutions, MLA , MLC and Ministers to re-appoint a disabled person who has already served as Commissioner, RPwD wavering of the required criteria? If so, what is the action of the Government. (Enclose details)	It has come to the notice of the Government and it is under process.
C	Has it come to the notice of the Government that the post of Commissioners age limit should be increased from 65 to 68 . If so, what is the action of the Government.	It has come to the notice of the Government and it is under process.
D	Will it not be helpful in upgrading the vacant post of the Secretary to the post Principal Secretary of RPwD Act office for the development of the Disabled persons; if so, what is the action proposed to be taken or method followed in this regard(Details to be provided)	In Government order No: MAMAE 296 PHP 1997, Dated: 31.03.1998 and Corrigendum No: MAMAE 380 PHP 2000, Dated: 05.08.2000 (copy enclosed) different posts have been sanctioned for the Karnataka State Commissioner, Commission for the Rights of the Persons with Disabilities Act Office. Secretary post has not been created in this order. Therefore upgrading the post of Secretary to the post of Principal Secretary in the Act office does not arise.
E	Will it not be beneficial to the persons with disabled, if the post of the Commissioner for Disabled to be filled by a person already worked as Commissioner for the Act Office for another term. What is the action of the Government?	According to existing RPwD rules 2019 Section 32(2), provision has been made to serve a person below the age of 65 to serve for another term as Commissioner for the Act Office.

WCD 55 PHP 2022

(Achara Halappa Basappa)
Minister for the Mines and Geology.
And Women and Child Development
And Empowerment of Differently
Abled and Senior Citizens

E-3706167/22

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲರ ಹಿತರಕ್ಷಣೆಗೆ ಸಮಾನ, ನೀತಿಯಿಂದನು ಸಹಭಾಗಿತ್ವದ ಬಗ್ಗೆ ಅಧಿನಿಯಮದ 1995 ರ ಅನುಷ್ಠಾನ, ಆಯುಕ್ತರ ಹುದ್ದೆ ಮತ್ತು, ಸಹಾಯಕ ಸಿಬ್ಬಂದಿವರ್ಗದ ಹುದ್ದೆಗಳ ಸೃಜನ ಹಾಗೂ ವಾಹನ ಮತ್ತು ಕಛೇರಿಗೆ ಅವಶ್ಯವಾಗಿರುವ ಪೀಠೋಪಕರಣಗಳ ಮುದ್ರಣಗಳನ್ನು ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: (1) ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ನಿಅಕ 194: ಎಡಿಎಸ್: 97-98: 5716 ದಿನಾಂಕ: 27-12-97.

(2) ದಿನಾಂಕ: 14-12-98 ರಂದು ಅಪರಾಹ್ನ 3-30ಕ್ಕೆ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

(3) ಅಧಿಸೂಚನೆ ಸಂಖ್ಯೆ: ಮಮಾಇ 296 ಪಿಹೆಚ್‌ಪಿ 97 ದಿನಾಂಕ: 29-11-97.

ಪ್ರಸ್ತಾವನೆ:

ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇವರನ್ನು ಅಂಗವಿಕಲರ ಅಧಿನಿಯಮ 1995 ರ ಸೆಕ್ಷನ್ 60(1) ರನ್ವಯ, ಆಯುಕ್ತರ ಹುದ್ದೆಯಲ್ಲಿ ನೇಮಕ ಮಾಡಲಾಗಿದೆ.

ಆಯುಕ್ತರ ಹುದ್ದೆಯ ಜೊತೆಗೆ, ಸಹಾಯಕ ಸಿಬ್ಬಂದಿ ವರ್ಗದ ಹುದ್ದೆಗಳನ್ನು ಸೃಜಿಸುವ ಬಗ್ಗೆ ಹಾಗೂ ಆಯುಕ್ತರ ಉಪಯೋಗಕ್ಕಾಗಿ ವಾಹನ ಮತ್ತು ಕಛೇರಿಗೆ ಅವಶ್ಯವಾಗಿರುವ ಪೀಠೋಪಕರಣ, ವಸ್ತು ಉಪಕರಣಗಳ ಖರೀದಿಯು ಅನಿವಾರ್ಯವಾಗಿರುವುದರಿಂದ, ಹುದ್ದೆಗಳನ್ನು ಹೊಸದಾಗಿ ಸೃಜಿಸುವಂತೆ, ಪ್ರಸ್ತಾಪಿಸಿದ್ದಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು, ದಿನಾಂಕ: 14-12-98 ರಂದು ನಡೆದ ಅಧಿಕಾರಿಗಳ ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ, ತೆಗೆದುಕೊಂಡಿರುವ ತೀರ್ಮಾನದಂತೆ, ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಮಮಇ 296 ಪಿಹೆಚ್‌ಪಿ 97 ಬೆಂಗಳೂರು, ದಿ: 31-3-98

ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಆಯುಕ್ತರ ಹುದ್ದೆಯನ್ನು ಒಳಗೊಂಡಂತೆ, ಈ ಕೆಳಕಂಡ ಕೆಲವು ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಹಾಗೂ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳಿಗೆ ಮಂಜೂರಾತಿ ನೀಡಲಾಗಿದೆ.

(ಸಹಿ)

SECTION

(ಅ) ಹೊಸದಾಗಿ ಸೃಷ್ಟಿಸಲಾದ ಹುದ್ದೆಗಳ ವಿವರಗಳು :—

ಕ್ರಮ ಸಂ. ಪದನಾಮ	ವೇತನಶ್ರೇಣಿ	ಸೃಜಿಸಲಾದ ಹುದ್ದೆಗಳ ಸಂಖ್ಯೆ
1) ಅಧ್ಯಕ್ಷರು	ನಿರ್ದಿಷ್ಟವಾದ ವೇತನಶ್ರೇಣಿಯನ್ನು ಪ್ರಸ್ತಾಪಿಸುವ ಅಗತ್ಯವಿಲ್ಲ	1
2) ಹಿರಿಯ ಕಚೇರಿ ಸಹಾಯಕರು	2375–75–2900–100–3700 –125–4450	1
3) ಸಮಾಜಾಧಿಕಾರಿಗಳು	2050–50–2300–75–2900 –100–3700–125–3550	1
4) ಶೀಘ್ರಲಿಪಿಗಾರರು	1400–40–1800–50–2300 –75–2675	3
5) ಸಹಾಯಕರು	1400–40–1800–50–2300 –75–2675	2
6) ದ್ವಿತೀಯ ದರ್ಜೆ ಸಹಾಯಕರು	1040–20–1100–30–1400 –40–1800–50–1900	1
7) ಬೆರಳಚ್ಚುಗಾರರು	1040–20–1100–30–1400 –40–1800–50–1900	1
8) ವಾಹನ ಚಾಲಕರು	1040–20–1100–30–1400 –40–1800–50–1900	1
9) 4ನೇ ದರ್ಜೆ ನೌಕರರು	840–15–900–20–1100– 30–1340	3

(ಆ) ಕಚೇರಿಯ ನಿರ್ವಹಣಾ ವೆಚ್ಚಗಳು :—

1) ಪ್ರಯಾಣ ವೆಚ್ಚ
2) ಕಟ್ಟಡ ಬಾಡಿಗೆ ದರ ಮತ್ತು ತೆರಿಗೆಗಳು
3) ಮುದ್ರಣ ಮತ್ತು ಲೇಖನ ಸಾಮಗ್ರಿಗಳು ಟೆಲಿಫೋನ್, ವಿದ್ಯುತ್, ನೀರು ಇತ್ಯಾದಿ
4) ಮೋಟಾರು ವಾಹನ (ಇಂಧನ ಮತ್ತು ದುರಸ್ತಿ)

ರೂ. 5,00,000 ವೆಚ್ಚಕ್ಕೆ ಮಿತಿಗೊಳಿಸಲಾಗಿದೆ.

(ಇ) ಅನಾವರ್ತಕ ವೆಚ್ಚಗಳು :

	ರೂ.
1) ಅಧ್ಯಕ್ಷರ ಉಪಯೋಗಕ್ಕಾಗಿ ಒಂದು ಕಾರು	4,00,000
2) ಕಚೇರಿಗೆ ಅವಶ್ಯವಿರುವ ಪೀಠೋಪಕರಣಗಳು	2,50,000
3) ದೂರವಾಣಿ, ಜೆರಾಕ್ಸ್ ಮತ್ತು ಬೆರಳಚ್ಚು ಯಂತ್ರ	1,70,000
4) ಕಚೇರಿಯಲ್ಲಿ ಅಧ್ಯಕ್ಷರು, ಸಮಾಜಾಧಿಕಾರಿಗಳು ಮತ್ತು ಸಿಬ್ಬಂದಿ ಪ್ರತ್ಯೇಕ ಕೊಠಡಿಗಳನ್ನು ನಿರ್ಮಿಸುವ ವೆಚ್ಚ	2,00,000
ಒಟ್ಟು	10,20,000

ಈ ಆದೇಶವನ್ನು ದಿನಾಂಕ: 14-2-98 ರಂದು ನಡೆದ ಅಧಿಕಾರಯುಕ್ತ ಸಮಿತಿಯು ಸಭೆಯಲ್ಲಿ ನೀಡಲಾಗಿರುವ ಸಮ್ಮತಿ ಮೇರೆಗೆ ಹೊರಡಿಸಲಾಗಿದೆ.

- 3 -

4) ಈ ವೆಚ್ಚವನ್ನು ಲೆಕ್ಕಶೀರ್ಷಿಕೆ 2235-02-101-[illegible] (ಯೋಜನೇತರ) [illegible] 26 ದಿನಾಂಕ [illegible] 7-[illegible] ನೀಡಲಾಗಿದೆ [illegible]

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಗೀತಾ ರವೀಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪ್ರತಿಗಳು:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು.
3) ಉಪ ಕಾರ್ಯದರ್ಶಿಗಳು -3 ಆರ್ಥಿಕ ಇಲಾಖೆ
4) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 380 ಪಿಹೆಚ್‌ಪಿ 2000

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 5-8-2000

ತಿದ್ದುಪಡಿ

ಸಂಖ್ಯೆ: ಮಮಇ 296 ಪಿಹೆಚ್‌ಪಿ 97, ದಿನಾಂಕ: 31-3-98 ರ ಸರ್ಕಾರದ ಆದೇಶದ ಕ್ರಮಸಂಖ್ಯೆ: (2) ರ " ಕೇಂದ್ರ ಕಛೇರಿ ಸಹಾಯಕರು " — ಎಂಬ ಪದಗಳ ಬದಲಿಗೆ " ಸಹಾಯಕ ಆಯುಕ್ತರು ಅಂಗವಿಕಲರ ಅಧಿನಿಯಮ –1995 " — ಎಂಬುದಾಗಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹುಚ್ಚಂತಪ್ಪ) 8/8
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಗೆ:-
(1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
(2) ಆಯುಕ್ತರು, ಅಂಗವಿಕಲರ ಅಧಿನಿಯಮ-95, ಆಯುಕ್ತರ ಕಛೇರಿ, ಬೆಂಗಳೂರು.
(3) ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು
(4) ಸಂಬಂಧಪಟ್ಟವರಿಗೆ.
(5) ಕಾರ್ಯದರ್ಶಿ /ಅಪರ ಕಾರ್ಯದರ್ಶಿ / ಅಧೀನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರ ಆಪ್ತಸಹಾಯಕರಿಗೆ.
(6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.